ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಗೆ ಚುನಾಯಿತ ಮಂಡಳಿಯನ್ನು ರದ್ದು ಗೊಳಿಸಿದ ನಂತರ ಮಹಾನಗರಸಭೆಗೆ ನೇಮಿತವಾದ ಸ್ವತಂತ್ರವಾಗಿ ಕೆಲಸ ನಿರ್ವಹಿಸುವ ಆಡಳಿತಾಧಿಕಾರಿಗಳು ಇಲ್ಲದೇ ಇರುವುದರಿಂದ ಸಾರ್ವಜನಿಕ ಮತ್ತು ಆಡಳಿತಾತ್ಮಕ ಮಹತ್ವದ ನಿರ್ಣಯ ಕೈಗೊಳ್ಳುವಲ್ಲಿ ವಿಳಂಬವಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಚುನಾವಣೆ ಆಗುವವರೆಗೆ ಸಾರ್ವಜನಿಕ ಅನುಕೂಲ ಸಲುವಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಆಡಳಿತಾಧಿಕಾರಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಷಯ :- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2365 (2769)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸುವ ಕುರಿತು ಸರ್ಕಾರದವರು ನಿರ್ಧಾರ ತೆಗೆದುಕೊಂಡಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯವು ಯಾವ ಹಂತದಲ್ಲಿದೆ?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :-

ಸರ್ಕಾರವು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲು ತತ್ವಶ: ಒಪ್ಪಿ, ದಿನಾಂಕ : 11-09-1995 ರಂದು ಆದೇಶ ಹೊರಡಿಸಿದೆ.

ವಿಷಯ :- ಸಕ್ಕರೆ ನಿರ್ದೇಶನಾಲಯದ ಕಛೇರಿಯ ಸ್ಥಳಾಂತರ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಮೈಸೂರಿನ ಕಟ್ಟಡದಿಂದ ಹಾಲಿಯಿರು (ಚೌಗಲೆ) ಕಟ್ಟಡಕ್ಕೆ ಸ್ಥಳಾಂತರಿಸಲು ತಗುಲಿರುವ ವಿರ್ಚೆಷ್ಟು ;

ಆ) ಹಾಲಿಯಿರುವ ಖಾಸಗಿ ಕಟ್ಟಡಕ್ಕೆ ನೀಡುತ್ತಿರುವ ತಿಂಗಳ ಬಾಡಿಗೆಯೆಷ್ಟು; ಹಾಗೂ ಮುಂಗಡ ಹಣ ಎಷ್ಟು;

ಇ) ಈ ಕಟ್ಟಡವನ್ನು ಬಾಡಿಗೆ ಪಡೆಯುವಲ್ಲಿ ಹಿಂದಿನ ನಿರ್ದೇಶಕರು ಹಾಗೂ ಕೇಂದ್ರ ಕಛೇರಿ ಸಹಾಯಕರು ಹಾಗೂ ಲಿಕ್ಕಪರಿಶೋಧನಾ ಸಹಾಯದ ನಿರ್ದೇಶಕರು ಅವ್ಯವ ಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :-

ಅ) ಮೈ ಶುಗರ್ ಕಟ್ಟಡದಿಂದ ಹಾಲಿ ಇರುವ ಕಟ್ಟಡಕ್ಕೆ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಸ್ಥಳಾಂತರಿಸಲು ಮತ್ತು ಮಹಡಿಗಳ ನಿರ್ಮಾಣ ಮತ್ತು ಪೀಠೋಪಕರಣ ಗಳನ್ನು ಅಳವಡಿಸಲು ರೂ. 3.29 ಲಕ್ಷಗಳ ವೆಚ್ಚ ತಗಲಿರುತ್ತದೆ.

ಆ) ಹಾಲಿ ಇರುವ ಖಾಸಗಿ ಕಟ್ಟಡಕ್ಕೆ ತಿಂಗಳಿಗೆ ಚದರ ಅಡಿಗೆ ರೂ. 6 ರಂತೆ ಒಟ್ಟು ರೂ. 22100 ಬಾಡಿಗೆ ನೀಡಲಾಗುತ್ತಿದೆ. ಮುಂಗಡ ಪಾವತಿಸಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ :- ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2369 (2996)

ಶ್ರೀ ಎಸ್ ಕೃಷ್ಣಪ್ಪ (ಬನ್ನೂರು) :- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಆ) ಅಂಗನವಾಡಿ ಕೇಂದ್ರಗಳಲ್ಲಿರುವ ಉಪಾಧ್ಯಾಯರುಗಳೆಷು; ಅವರುಗಳು ಪಡೆ ಯುತ್ತಿರುವ ಸಂಬಳವೆಷ್ಟು ;

ಇ) ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಸರ್ಕಾರದ ನೌಕರರ ಸಂಬಳ ಕೊಡುವ ವಿಚಾರ ಇದೆಯೇ ;